ಕೊಡು...' ಎಂದು ಇವಳು ಹತ್ತಿರ ಹೋಗಿ ನಿಂತಳು.

ಗಾಡಿಯ ಹೆಂಗಸು ಬ್ಯಾಗೊಂದರಲ್ಲಿ ಇಟ್ಟಿದ್ದ ಸ್ಟೀಲಿನ ತಟ್ಟೆ ತೆಗೆದು ದಬರಿಯಲ್ಲಿದ್ದ ತಣ್ಣಗಿನ ಅನ್ನ ಹಾಕಿ ಅದಕ್ಕೆ ಸಾಂಬಾರು ಸುರಿದು ನೀಡಿದಾಗ ಇವಳು ಗಬಗಬನೆ ತಿನ್ನತೊಡಗಿದ್ದನ್ನು ಕಂಡು ಅವಳು ತೀವ್ರವಾಗಿ ಹಸಿದಿದ್ದಾಳೆ ಎಂದು ನನಗೆ ದೃಢವಾಯಿತು. ಗಾಡಿಯ ಹೆಂಗಸಿನ ಗಂಡ ಇದೆಲ್ಲ ಅರಿಯದವನಂತೆ ತನ್ನ ಪಾಡಿಗೆ ತಾನು ಗಾಡಿಗೆ ಸಾಮಾನು ತುಂಬುತ್ತಿದ್ದ. ಈ ಮಹಾನಗರದಲ್ಲಿ ಹೊಟ್ಟೆಪಾಡಿಗಾಗಿ ನನ್ನಂತೆಯೇ ಜನರು ಏನೆಲ್ಲಾ ಮಾಡುತ್ತಾರೆ ಎನಿಸಿತು. ಕೈಯ್ಯಲ್ಲಿದ್ದ ವಾಚಿನಲ್ಲಿ ಸಮಯ ನೋಡಿದೆ. ಗಂಟೆ ಆಗಲೇ ಹನ್ನೊಂದೂವರೆಯಾಗಿತ್ತು. ಬೆಳಗಿನಿಂದ ಒಂದೇ ಸಮ ಕೆಲಸ ಮಾಡಿ ಆಯಾಸವಾಗಿದ್ದರಿಂದ ಕಣ್ಣುಗಳು ಎಳೆಯತೊಡಗಿ ದೊಡ್ಡದಾಗಿ ಆಕಳಿಸಿದೆ.

ಒಂದು ಪ್ಲೇಟು ಅನ್ನ ಸಾಂಬಾರು ತಿಂದವಳು, 'ಇನ್ನೊಂದು ಪ್ಲೇಟು ಇದೆಯೇನಕ್ಕಾ...' ಎಂದಳು. ಹೂಂ ಎಂದ ಗಾಡಿಯ ಹೆಂಗಸು ತಟ್ಟೆಗೆ ಮತ್ತೆ ಅನ್ನ ಹಾಕಿ ಸಾಂಬಾರು ಸುರಿದು ಎಲ್ಲವನ್ನೂ ಮುಚ್ಚಿ ಎತ್ತಿಡತೊಡಗಿದಳು. ಇವಳು ಅನ್ನ ತಿಂದು ಗಾಡಿಯವಳಿಗೆ ತಟ್ಟೆ ನೀಡಿ ಅಲ್ಲಿಯೇ ಪ್ಲಾಸ್ಟಿಕ್ ಜಗ್ಗಿನಲ್ಲಿದ್ದ ನೀರಿನಿಂದ ಕೈತೊಳೆದುಕೊಂಡು ಜಗ್ಗನ್ನೆತ್ತಿ ನೀರು ಕುಡಿದು ಡರ‍್ರನೆ ತೇಗಿ ನನ್ನತ್ತ ಕೃತಜ್ಞಾಪೂರ್ವಕ ನೋಟ ಹರಿಸಿದಳು. ಅಷ್ಟರಲ್ಲಿ ಗಾಡಿಯ ಹೆಂಗಸು ತಟ್ಟೆ ತೊಳೆದು ಬ್ಯಾಗಿನಲ್ಲಿಟ್ಟಳು.

ನಾನು ಜೇಬಿನಲ್ಲಿದ್ದ ಪರ್ಸ್ ತೆಗೆದು ಗಾಡಿಯವನಿಗೆ ಹಣ ನೀಡಿದೆ. ಅವನು ನನಗೆ ಚಿಲ್ಲರೆ ಕೊಟ್ಟ ಬಳಿಕ ಗಾಡಿಯನ್ನು ಮುಂದಕ್ಕೆ ತಳ್ಳಿದ. ಅವನ ಹೆಂಡತಿ ಅವನನ್ನು ಹಿಂಬಾಲಿಸಿದಳು.

'ನೀನು ಎಷ್ಟೊಂದು ಒಳ್ಳೇಯವನು ರಾಜಾ...' ಎಂದು ಇವಳು ನನ್ನ ಕೆನ್ನೆ ಸವರಿದಳು. ನಾನು ಪ್ರತಿಭಟಿಸಲಿಲ್ಲ. ಅವಳು ಊಟ ಮಾಡಿದ ನಂತರ ಯಾಕೋ ಏನೋ ನಾನು ಒಂದು ರೀತಿಯ ಶಾಂತ ಮನಃಸ್ಥಿತಿಗೆ ತಲುಪಿದ್ದೆ.

'ಸರಿ ಬರ್ತೀನಿ...' ಎಂದು ಬೈಕ್ ಸ್ಟಾರ್ಟ್ ಮಾಡಿದೆ.

'ಹೊರಟೇಬಿಟ್ಟೇಯಾ ರಾಜಾ...' ಎಂದು ಬೈಕಿನ ಹ್ಯಾಂಡಲ್ ಹಿಡಿದುಕೊಂಡಳು.

'ಬೆಳಿಗ್ಗೆಯಿಂದ ಒಂದೇ ಸಮ ಕೆಲ್ಸ ಮಾಡಿ ಸುಸ್ತಾಗಿದೆ... ಹೋಗ್ಬೇಕು...' ಎಂದು ನಿಜವನ್ನೇ ನುಡಿದೆ.

'ಮುಖ ನೋಡಿದ್ರೆ ಇನ್ನೂ ಮದ್ವೆ ಆಗಿಲ್ಲ ಅನ್ಸುತ್ತೆ... ನಿನಗೆ ಒಳ್ಳೇ ಹೆಂಡ್ತಿ ಸಿಕ್ತಾಳೆ...' ಎಂದು ಕಿಸಕ್ಕನೆ ನಕ್ಕಳು. 'ಎಲ್ಲಿ ಕೆಲ್ಸ ಮಾಡೋದು... ದಿನಾ ಇಷ್ಟೊತ್ತಿಗೆ ಬರ್ತೀಯಾ ಕೆಲ್ಸದಿಂದ...' ಎಂದು ನನ್ನ ಬೆನ್ನ ಮೇಲೆ ಕೈಯಾಡಿಸಿದಳು. ಪೀಣ್ಯ ಮೂರನೆಯ ಹಂತದಲ್ಲಿ ನಾನು ಕೆಲಸ ಮಾಡುತ್ತಿದ್ದ ಕಾರ್ಖಾನೆಯ ಹೆಸರು ಹೇಳಿ ಅಲ್ಲಿ ನಾನೊಬ್ಬ ಸಾಧಾರಣ ಕಾರ್ಮಿಕ, ಬೆಳಿಗ್ಗೆ ಎಂಟು ಗಂಟೆಯಿಂದ ಸಂಜೆ ಐದು ಗಂಟೆವರಗೆ ಕೆಲ್ಸ ಮಾಡ್ತೀನಿ, ಈವತ್ತು ಲೇಟಾಯ್ತು ಎಂದೆ.

'ಸರಿ... ನನ್ನನ್ನ ಅಲ್ಲಿ ಮುಂದಿನ ರಸ್ತೆಯವರ‍್ಗೂ ಬಿಡು... ಅಲ್ಲಿಂದ ನಡಕಂಡು ಹೋಗ್ತೀನಿ...' ಎಂದು ಬೈಕು ಹತ್ತಿ ಕುಳಿತಳು. ಒಳ್ಳೆಯ ಸಹವಾಸವಾಯಿತು ಎಂದು ಮನದಲ್ಲಿ ಅನಿಸಿದರೂ ಪ್ರತಿಕ್ರಿಯಿಸದೆ ಬೈಕನ್ನು ಮುಂದಕ್ಕೆ ಓಡಿಸಿದೆ. ಹಿಂದೆ ಕುಳಿತಿದ್ದವಳು ಸುಮ್ಮನೆ ಕೂರದೆ, 'ನಿಮ್ಮ ಫ್ಯಾಕ್ಟರಿ ಎಲ್ಲಿ ಬರ್ತದೆ ರಾಜಾ...' ಎಂದಳು. ಅನ್ಯಮನಸ್ಕನಾಗಿ ತೀವ್ರ ಉದಾಸೀನತೆಯಿಂದ ನಮ್ಮ ಕಾರ್ಖಾನೆಯ ವಿಳಾಸ ತಿಳಿಸಿದೆ.

ಒಂದು ಕಿಲೋಮೀಟರ್ ದೂರ ಚಲಿಸಿದ ನಂತರ, 'ಇಲ್ಲೇ... ಇಲ್ಲೇ ನಿಲ್ಸು ರಾಜಾ...'